doc-5210
T.P-2.

ಎಲ್ಲ ವಿಧದ ಆಯು ರ್ವೇದ ಔಷಧಗಳಿಗೆ

ಅ ಶೋ ಕಾ ಫಾ ರ್ಮ ಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

**L. N. Press**

Sivarampet, Mysore

Reg No M 1299 - Sri - 24-1-1958

42nd Year - 'Satyavadi' Mysore

# ಸತ್ಯವಾದಿ

ಸ್ಥಾಪಕರು– ಅಂಚೆಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ

ಅಕಷ್ಣೀಯ ಲೇಖನಗಳಿಗೆ

" ಸತ್ಯವಾದಿ " ಪತ್ರಿಕೆಯನ್ನು

ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

## ಗಣಿತದ ಪ್ರಚಂಡ ಬುದ್ಧಿವಂತ

ಬೆಂಗಳೂರು 23—ಪ್ರೊ|| ಡಬ್ಲ್ಯು. ಜೆ. ಪಾಲ್ ರಾಜುರವರ ಅಧ್ಯಕ್ಷತೆಯಲ್ಲಿ ಇಂಜಿನಿಯರಿಂಗು ಕಾಲೇಜಿನ ಸಭಾಂಗಣದಲ್ಲಿ ಗಣಿತಶಾಸ್ತ್ರದ ಪ್ರಚಂಡ ಬುದ್ಧಿವಂತರಾದ ಶ್ರೀ ಎಲ್ ಸಂಜೀವಶರ್ಮ ಪ್ರದರ್ಶನವಿತ್ತರು ಅತಿಕಷ್ಟದ ಗಣಿತ ಸಮಸ್ಯೆಗಳನ್ನು ಅವರು ಬೇಗ ಬೇಗ ಪರಿಹರಿಸುತ್ತಿದ್ದರು

## ಆಕ್ರಮಣ ಪ್ರಶ್ನೆ ಇಲ್ಲವಂತೆ !

ಶ್ರೀನಗರದಲ್ಲಿ ಮೊನ್ನೆ ಪತ್ರಿಕೆಯವರ ಕೋರ್ವರ ಸಂದರ್ಶನದಲ್ಲಿ ಕಾಶ್ಮೀರದ ಮಾಜಿ ಪ್ರಧಾನಿ ಷೇಕ್ ಅಬ್ದುಲ್ಲಾ ಮಾತನಾಡುತ್ತಾ, ಕಾಶ್ಮೀರದಲ್ಲಿ ಪಾಕಿಸ್ತಾನದ ಆಕ್ರಮಣವನ್ನೆತ್ತಿದರೆ ಯಾವ ಉದ್ದೇಶವೂ ಸಾಧಿತವಾದಂತಾಗುವದಿಲ್ಲ ಈಗಿರುವದು ಮತಸಂಗ್ರಹ ಪ್ರಶ್ನೆ. ಭಾರತಕ್ಕೆ ಕಾಶ್ಮೀರ ಸೇರ್ಪಡೆ ಬಲವಂತದಿಂದ ಆಗಿದೆ ಎಂದರು.

## ಪಾಕ್ ಸೇನೆಯಿಂದ ಗಡಿ ಭಂಗ

ಕರೀಂಗಂಜಿಗೆ ಬಂದಿರುವ ವರದಿಯ ಪ್ರಕಾರ ಪಾಕಿಸ್ತಾನದ ಸಶಸ್ತ್ರ ಸೇನೆಯು ಭಾರತದ ಪ್ರದೇಶ ಸಿಲ್ಚೆಟ್ಟಿಗೆ ಕಳೆದ ವಾರ ಪ್ರವೇಶಿಸಿ ಭಾರತದ ಒರ್ವ ಸಿಪಾಯಿ ಮತ್ತು ಪೌರನನ್ನು ಅಪಹರಿಸಿಕೊಂಡುಹೋದರು

## ಇಂಗ್ಲೀಷು ಇರಲಿ

ಪ್ರಸಿದ್ಧ ಕನ್ನಡ ಕವಿ ಪ್ರೊ|| ದ. ರಾ ಬೇಂದ್ರೆಯವರು ಕನ್ನಡ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಏರ್ಪಾಟಾಗಿದ್ದ ಪೆಮಿನಾರಿನಲ್ಲಿ ಭಾಷಣಮಾಡಿ, ಅಧಿಕೃತ ಭಾಷೆಯನ್ನು ಇಂಗ್ಲೀಷಿನಿಂದ ಹಿಂದಿಗೆ ಅತುರದಿಂದ ಬದಲಾಯಿಸುವುದರಿಂದ ಎಚ್ಚರಿಸಿದರು

X X X 1966 ಜನವರಿ 26 ರಂದು ಪ್ರಜಾತಂತ್ರ್ಯ ದಿನಾಚರಣೆಯಂದು ಭಾರತ ರಾಷ್ಟ್ರಪತಿಯವರು ಘೋಷಿಸುವರು

## ಪೌರಸಭೆ

ಮೈಸೂರು ಪೌರಸಭೆಯ ಸಾಧಾರಣ ಸಭೆ ಈ ತಿಂಗಳ 31 ನೇ ತಾ|| ಮಧ್ಯಾಹ್ನ 4 ಗಂಟೆಗೆ ಸಮ್ಮಾನೇಕ್ಷವಾಗಿರುವುದು

## ಉಚಿತ ಹಾಲು

ಭಾರತದ ಭಂಗಾರದ ಜಿಲ್ಲೆಯಾದ ಕೋಲಾರದಲ್ಲಿ ಶಾಲೆಗೆ ಹೋಗುವ ವಿದ್ಯಾರ್ಥಿಗಳಿಗೆ ಪ್ರತಿದಿನ ಉಚಿತವಾಗಿ ಹಾಲು ಕೊಡಲಾಗುತ್ತಿದೆ ದೂರದ ಅಮೇರಿಕಾದವರಿಂದ ದೊರೆತ ಉದಾರ ದಾನವಾದ ಹಾಲಿನಪುಡಿಯಿಂದ ಇದು ತಯಾರಾಗುವುದು ಇದರ ಒಂದು ಕಪ್ಪು ಹಾಲನ್ನು ಭಾರತದ ವ್ಯವಸಾಯ ಮಂತ್ರಿಗಳಾದ ಶ್ರೀ ಎಂ ವಿ ಕೃಷ್ಣಪ್ಪನವರು ಕುಡಿದು, ಚೆನ್ನಾಗಿದೆ ಮತ್ತು ರುಚಿಯಾಗಿದೆ ಎಂದಿರುವರು.

## ಸತ್ತು ಹೋಯಿತು

ಬಾಗ್ದಾದು ಒಸ್ಮಂದ ಸತ್ತು ಹೋಯಿತು ಎಂದು ಈಜಿಪ್ಟಿನ ವಿದೇಶಾಂಗ ಮಂತ್ರಿ ಫಾಜಿಯವರು ಈಜಿಪ್ಟಿನ ರಾಷ್ಟ್ರೀಯ ಸಭೆಯಲ್ಲಿ ತಿಳಿಸಿದರೆಂದು ಈಜಿಪ್ಟಿನ ರಾಷ್ಟ್ರೀಯ ಸಭೆಯಲ್ಲಿ ನುಡಿದರೆಂದು ಕೈರೋ ವಾರ್ತೆ

## ಮೈಸೂರಿಗೆ ನಿರಾಶ್ರಿತರು

ಪೂರ್ವ ಪಾಕಿಸ್ತಾನದ 6 ಸಾವಿರ ನಿರಾಶ್ರಿತರಿಗೆ ವೈಸೂರಿನಲ್ಲಿ ಆಶ್ರಯಕೊಡಲು ಅದಕ್ಕಾಗಿ ವೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಬಳಿ 8 ಸಾವಿರ ಎಕರೆ ಭೂಮಿ ಕೊಡುವುದಾಗಿ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ನುಡಿದಿರುವರು.

## ನಾಳೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ
25 ಪಂಚಮಿ ಉತ್ತರಾಭಾದ್ರ

# ಭಾರತಕ್ಕೆ ಜಪಾನಿನಿಂದ 18 ರ ಬಿಲಿಯ ಎನ್ ಸಾಲ

ಟೋಕಿಯೋ 23 — ಜಪಾನಿನ ಪ್ರಧಾನ ಸಂಧಾನಕಾರರಾದ ಉಸಿಬಾರವರು ಜಪಾನಿನ ವಾರ್ತಾಗಾರರಿಗೆ ಹೇಳಿಕೆಯಿತ್ತು, ಸರ್ಕಾರದ ಸಾಲದ ರೂಪದಲ್ಲಿ ಇಡೀ 18 ಬಿಲಿಯ ಯೆ ಸಾಲವನ್ನು ಭಾರತಕ್ಕೆ ಕೊಡಲು ಜಪಾನಿನ ಸರ್ಕಾರ ಒಪ್ಪಿದೆ ಎಂದರು

# ರೈಲೆ ಅವಘಡದಲ್ಲಿ 3 ಸಾವು

ಕಟಕ್ 23 — ಬೀರಾಮಪುರದ ಬಳಿ ಹೈದರಾಬಾದು-ಹೌರಾ ಜನತಾ ಎಕ್ಸ್‌ಪ್ರೆಸ್ ಮತ್ತು ಪುರಿ-ಹೈದರಾಬಾದು ಪೇಸೆಂಜರು ರಾತ್ರಿ 10 ಗಂಟೆಯಲ್ಲಿ ಡಿಕ್ಕಿ ಬಡಿದು 3 ಜನರು ಸತ್ತು 12 ಜನರು ಗಾಯಗೊಂಡರು

---

ನವ ದೆಹಲಿ 23 — ಮುಂದಿನ ಸಾಲಿಗೆ ಯೋಜನಾ ವೆಚ್ಚ ರೂ 900 ಕೋಟಿ ನಿಗದಿ ಆಗಿದೆ

ಮದ್ರಾಸು 23 — ಹಿಂದಿ ವಿರೋಧಿಗಳಿಗೆ ಗೌಹತಿ ಕಾಂಗ್ರೆಸು ಒಂದು ಜಯವೆಂದು ಶ್ರೀ ಸಿ ರಾಜಗೋಪಾಲಾಚಾರಿ ಇಲ್ಲಿನ ಬಹಿರಂಗ ಸಭೆಯಲ್ಲಿ ತಿಳಿಸಿದರು ದ್ರಾವಿಡ ಮುನ್ನೇತ್ರ ಕಜಗಂನಾಯಕ ಶ್ರೀ ಸಿ ಎನ್ ಅಣ್ಣಾದೊರೆ ಈ ಸಭೆಯಲ್ಲಿ ಭಾಷಣ ಮಾಡಿದರು

ಪಾಂಡಿಚೇರಿಯಿಂದ ನಗರಕ್ಕೆ ಬರು ಬೊಂಬಾಯಿ ನಗರದಿಂದ ಗೋಧಿ ತ್ತಿದ್ದ ಒಂದು ಕಾರನ್ನು ಹಿಡಿದು ಅದರ ಅಕ್ರಮವಾಗಿ ಸಾಗಿಸಿದ ಆರೋಪದಿಂದ ಬಂಧಿತಳಾದ ಒರ್ವ ಯುವತಿ ಪೋಲೀಸು ಲಾಳಸ್ಪಿನಲ್ಲಿ ಹೆತ್ತಳು

ಹೊಸ ಮೈಸೂರಿನ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಬೇಕೆಂಬುದು ತಮ್ಮ ಅಶಯ ಎಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನುಡಿದಿರುವರು

ಹೈದರಾಬಾದಿನಲ್ಲಿ ಮೊನ್ನೆ ಸೋಷಲಿಸ್ಟ್ ಪಕ್ಷದ ನಾಯಕ ಡಾ|| ಲೋಹಿಯಾರೊಡನೆ ಪಕ್ಷದ ಕಾರ್ಯಕರ್ತರು ಬಣ್ಣ, ಬಣ್ಣ ಮತ್ತು ಅಣಿಮೊಡನೆ ಹೋಗಿ ಅಲ್ಲಿ ಅಂಗಡಿಗಳ ಇಂಗ್ಲೀಷು ಹೆಸರು ಅಳಿಸಲು ಉಪಕ್ರಮಿಸಿದರು ಈ ವಿಷಯವನ್ನು ಅನೇಕರು ಒಪ್ಪಿ ಪ್ರಾದೇಶೀಯ ಭಾಷೆಗಳ ಹೆಸರನ್ನು ಹೊಂದುವದಾಗಿ ನುಡಿದರು.

# ಅಕ್ಬರ್ ತನಗೆ ಮಗ ಹುಟ್ಟಿದ್ದನ್ನು ತಿಳಿದ ವಿಚಿತ್ರ ರೀತಿ

ಅಕ್ಬರನು ಅತ್ಯಂತ ಸಂತೋಷಚಿತ್ತನಾಗಿ ಆಗ್ರಾಕ್ಕೆ ಬಂದು ಈ ಶುಭ ಸಮಾಚಾರವನ್ನು ಅತನ ಪ್ರಿಯ ಪತ್ನಿ ಮಾಯರ್ಜವ್ – ಉಸ್ – ಜಾಮರ್ಜಗೆ ತಿಳಿಸಿದನು : ಒಂದು ತಿಂಗಳ ನಂತರ ರಾಣಿಯು ಗರ್ಭಿಣಿಯಾಗಿರುವ ವಿಷಯವು ಹೊರಪಟ್ಟಿತು.

II

ಫಕೀರನ ಸೂಚನೆಯಂತೆ ರಾಣಿಯು ಸಿಕ್ರಿಯಲ್ಲಿ ವಾಸಿಸುವಂತೆ ಏರ್ಪಡಿಸಿದನು.

ನಂತರ, ರಾಜ್ಯದ ಹಿತಕ್ಕಾಗಿ ಪ್ರವಾಸವು ಅತ್ಯವಶ್ಯವೆಂದು ಅಕ್ಬರನು ತಿಳಿದನು ; ಆ ಮೊದಲಿನ ರಾಜಧಾನಿಯಲ್ಲಿ ತನ್ನ ಇಂಬಿಕೆಯು ಕೆಲವು ಕಾಲ ವಾದರೂ ಅವಶ್ಯಕವೆಂದು ಅರಿತನು.

ರಾಜಕುಮಾರನ ಜನನ ಕಾಲದಲ್ಲಿ ತಾನು ಸಿಕ್ರಿಯಲ್ಲೇ ಇರಬೇಕೆಂದು ಅಕ್ಬರನ ಇಚ್ಛೆಯಾಗಿದ್ದಿತು ; ಆದಾಗ್ಯೂ ಮಗು ಹುಟ್ಟಿದೊಡನೆ ತನಗೆ ವರ್ತಮಾನ ತಿಳಿಯುವ ಏರ್ಪಾಡನ್ನು ಮಾಡಿ ತಾನು ದೆಹಲಿಗೆ ಪ್ರಯಾಣಮಾಡಲು ನಿಶ್ಚೈಸಿದನು.

ತನ್ನ ಮಂತ್ರಿಗಳ ಸಭೆಯನ್ನು ಕರೆದು, 'ರಾಜಕಿಶೋರನು ಜನಿಸಿದ ವಾರ್ತೆಯನ್ನು ಅತಿ ಬೇಗ ಕಳುಹಿಸಲು ನಿಮ್ಮಲ್ಲಿ ಯಾರು ಒಪ್ಪಿಕೊಳ್ಳುವಿರಿ ಎಂದು ಕೇಳಿದನು.

ಒಬ್ಬ ಮಂತ್ರಿ ಎದ್ದು ' ಅಲಾಂಪನಾ, ಅತಿ ವೇಗವಾಗಿ ಓಡುವ ಹೊಸ ಕುದುರೆಗಳ ಸಹಾಯದಿಂದ ನಾನು ವರ್ತಮಾನವನ್ನು ದೆಹಲಿಗೆ 7 ಗಂಟೆಗಳಲ್ಲಿ ತಲಪಿಸುತ್ತೇನೆ ' ಎಂದನು ; ಮತ್ತೊಬ್ಬನೆದ್ದು ನಾನು 5 ಗಂಟೆಗಳಲ್ಲಿ ತಲಪಿಸುತ್ತೇನೆ ಎಂದನು.

ಚಕ್ರವರ್ತಿಯು ನಸುನಕ್ಕು, ತನ್ನ ನಂಬಿಕಸ್ಥನೂ, ರಾಜಕವಿಯೂ, ಮತ್ತು ತನ್ನ ಪ್ರಧಾನಿಯೂ ಆಗಿದ್ದ ಬೀರಬಲ್ ಕಡೆ ನೋಡಿದನು : ಜನ್ಮತಃ ಬ್ರಾಹ್ಮಣನಾಗಿದ್ದ, ಹಿಂದೆ ಮಹೇಂದ್ರದಾಸ್ ಎಂದು ಕರೆಸುಲ್ಪಡುತ್ತಿದ್ದ ಬೀರಬಲ್ಲನು ತನ್ನ ಅಗಾಧ ವಿವೇಕದಿಂದ ಅಕ್ಬರನ ಹೃದಯದಲ್ಲಿ ಭದ್ರವಾದ ಸ್ಥಾನ ಪಡೆದಿದ್ದನು ; ಬೀರಬಲ್ಲನು ಮುತ್ಸದ್ದಿಯೂ ಸೇನಾನಿ.— ಜಹಪಾನ, ನಾನು 45 ನಿಮಿಷಗಳಲ್ಲಿ ಕಳುಹಿಸುತ್ತೇನೆ, ಅದರೆ ಅದಕ್ಕೆ ಕುಂಬಾ ಹಣ ಖರ್ಚಾಗುವುದು ಎಂದು ಹೇಳಿದನು.

ಆಸ್ಥಾನದಲ್ಲಿದ್ದ ಇತರರು ಗೊಣಗೊಣಗುಟ್ಟಿನ ಮಧ್ಯೆ, ಅಕ್ಬರನು ' ಏನು ಬೀರಬಲ್, 45 ನಿಮಿಷಗಳು ! ನಿನಗೆ ಜ್ಞಾನವಿದೆಯೇ ' ಎಂದು ಕೇಳಿದನು.

ಬೀರಬಲ್ಲನು ಏನೂ ಗಾಬರಿಗೊಳ್ಳದೆ, ವರ್ತಮಾನವು 45 ನಿಮಿಷಗಳಲ್ಲಿ ತಲಪುವುದೆಂದು ನಾನು ಭರವಸೆ ಕೊಡುತ್ತೇನೆ ಆದರೆ ಅದಕ್ಕೆ ಹೆಚ್ಚು ಹಣ ಖರ್ಚಾಗುವುದು ಎಂದು ಹೇಳಿದನು.

ರಾಜ ಬೀರಬಲ್ಲನು ತಾನು ಮಾಡಬೇಕೆಂದಿರುವ ಯೋಜನೆಯನ್ನು ಯಾರಿಗೂ ಹೊರಪಡಿಸಲಿಲ್ಲ ಎಷ್ಟು ಖರ್ಚಾದರೂ ಆಗಲೆಂದು ಅಕ್ಬರನ ಸಮ್ಮತಿಯಿಂದ ತನ್ನ ಚಾಣಕ್ಯ ಯೋಜನೆ ನೆರವೇರಿಸಲು ಬೀರಬಲನು ಹೊರಟುಹೋದನು ಕೂಡಲೇ ಗಾರೆ ಮೇಸ್ತ್ರಿಗಳನ್ನು ಕರೆಸಿ ಡೆಲ್ಲಿಯಿಂದ ಸಿಕ್ರಿವರೆಗೆ ಒಂದೊಂದು ಮೈಲಿ ದೂರದಲ್ಲಿ ಭಾರಿ ಕಂಬಗಳನ್ನು ಕಟ್ಟಲು ಸೂಚನೆಕೊಟ್ಟನು

ಬಹುಬೇಗ ರಾಕ್ಷಸಾಕಾರದ ಕಂಬಗಳು ಭೂಮಿಯ ಮೇಲೆ ಎದ್ದುದನ್ನು ಕಂಡು ಜನರು ವಿಸ್ಮಯಗೊಂಡರು ನಿಲ್ಲಿಸಿದ ಕಂಬಗಳು 15 ಅಡಿ ಎತ್ತರ 12 ಅಡಿ ವ್ಯಾಸವೂ ಉಳ್ಳವಾಗಿ ಮೇಲೆ ಒಂದು ವೇದಿಕೆ ಇದ್ದಿತು ಏಣಿ ಮೇಲೆ ಅಲ್ಲಿಗೆ ತಲಪುವ ಏರ್ಪಾಟಾಗಿದ್ದಿತು ಪ್ರತಿ ಕಂಬದ ಮೇಲೂ ಭಾರಿ ನಗಾರಿ ಇಡಲಾಗಿದ್ದು, ಅಲ್ಲಿ ಓರ್ವನನ್ನು ನೇಮಿಸಲಾಗಿದ್ದಿತು ಶಿಶು ಜನನ ಹತ್ತಿರ ವಾದಂತೆ ಇವರು ಈ ವಾರ್ತೆಯನ್ನು ದೆಹಲಿಗೆ ತಲುಪಿಸುವ ಬಗ್ಗೆ ಶಿಕ್ಷಣಕೊಡ ಲಾಗಿದ್ದಿತು ರಾಜಕುಮಾರನು ಜನಿಸಿದನು. ಕೂಡಲೇ ಸಿಕ್ರಿ ಗ್ರಾಮದ ಮಧ್ಯದಲ್ಲಿ ಕಟ್ಟಲಾಗಿದ್ದ ಕಂಬದ ಮೇಲೆ ಬಾರಿಸಿದ ನಗಾರಿ ಪ್ರತಿಧ್ವನಿ ಕೊಟ್ಟಿತು ಈ ಶಬ್ದ ಕೇಳ ವುದು ನಿಲ್ಲುವುದಕ್ಕೆ ಮುಂಚೆಯೇ ಸಿಕ್ರಿಯ ನೂರು ಮೈಲಿ ಅಚೆ ಕಂಬದಿಂದ ಶಬ್ದ ಹೊಂಟಿತು ಹೀಗೆಯೇ ದೆಹಲಿಗೆ ತಲ ಪಿತು.

ಈ ವಾರ್ತೆಗಾಗಿ ಅಕ್ಬರನು ಅರಮನೆಯಲ್ಲಿ ಅಸಕ್ತಚಿತ್ತನಾಗಿ ಹಿಂದೆ ಮುಂದೆ ನೋಡುತ್ತಿದ್ದಾಗ ಭಾರಿ ಬಾಗಿಲುಗಳು ತೆರೆಯಲ್ಪಟ್ಟವು, ಓರ್ವ ಸಿಪಾಯಿ ಒಳ ನುಗ್ಗಿ " ಮಹಾಸ್ವಾಮಿ, ಮಗು ಹುಟ್ಟಿತು " ಎಂದು ಕೂಗಿಕೊಂಡ ಅಕ್ಬರನ ವೆರಣಕಾಲೂರಿ ತನಗೆ ಮಗನನ್ನು ಕೊಟ್ಟಿದ್ದಕ್ಕಾಗಿ, ಆ ವಾರ್ತೆ 45 ನಿಮಿಷಗಳಲ್ಲೇ ತಲಪಿದ್ದಕ್ಕೆ, ಕೃತಜ್ಞತೆಯನ್ನು ಭಗವಂತನಿಗೆ ಅರ್ಪಿಸಿದನು


ವುಡ್‌ಲ್ಯಾಂಡ್ಸ್ ಜಯಪ್ರದ 3 ನೇ. ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್ — ಶಶಿಕಲಾ ವಾಸ್ತವಹಿಸಿರುವ

ನೌದೊಗ್ಯಾರ = Nau Do Gyara

ಅತ್ಯಮೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ— ಕೀರ್ತಿಯುತ 6 ನೇ ವಾರ

ಮಾಯಾಬಜಾರ್

ಎ. ಟಿ. ರಾಮುರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಪೇಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 25–1–58 ರಿಂದ

ಕಾವೇರಿ (ತಮಿಳು) [ ದಿನ 3 ಆಟಗಳು ]

ನಟವರ್ಗ— ಶಿವಾಜಿ ಗಣೇಶ್, ಪದ್ಮಿನಿ, ಕೃಷ್ಣ, ಮಧುರಂ

ಬೆಳಿಗಿನ ಪ್ರದರ್ಶನ 10–30 ಕ್ಕೆ — ತಾ || 24 ರಿಂದ 3 ದಿವಸಗಳು ಮಾತ್ರ

SIREN OF BAGDAD ( Technicolor Picture )

SHAKTI SUDHÀ

A Superb Tonic


Edited, Printed& Published by Dharma Prachara Nurata M S Krishna Rao, at the Satyavadi Press Chamarajpura Mysore